# ಜೀವನದಲ್ಲಿ ಸಾತ್ವಿಕತೆ ಅಳವಡಿಸಿಕೊಳ್ಳಿ

## ಸಮಾರೋಪ ಸಮಾರಂಭದಲ್ಲಿ ಸೋಂದಾ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಶ್ರೀ




ಬೀಗಾರಿನಲ್ಲಿ ನಡೆದ ದೇವಸ್ಥಾನದ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ಆಶೀರ್ವಚನ ನೀಡಿದರು.

• **ಕನ್ನಡಪ್ರಭ ವಾರ್ತೆ** ಯಲ್ಲಾಪುರ

ಜೀವನದ ಪ್ರತಿ ಹಂತದಲ್ಲೂ ಸಾತ್ವಿಕತೆ ಅಳವಡಿಸಿಕೊಳ್ಳಬೇಕು ಎಂದು ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ಹೇಳಿದರು.

ಅವರು ತಾಲೂಕಿನ ವಜ್ರಳ್ಳಿ ಗ್ರಾಪಂ ವ್ಯಾಪ್ತಿಯ ಬೀಗಾರಿನ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದ ಪ್ರತಿಷ್ಠಾಪನ ಮಹೋತ್ಸವದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಜೀವನದಲ್ಲಿ ಮೂರು ಪರ್ವತಗಳು ಎದುರಾಗುತ್ತವೆ. ಚಿಂತೆ, ಕ್ರೋಧ, ಭಯ ಇವು ನಮ್ಮ ಬದುಕಿನಲ್ಲಿ ಆವರಿಸಿಕೊಂಡಾಗ ಎಂತಹ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ಅನುಭವದಿಂದಲೇ ನಾವು ಅರಿವು ಮೂಡಿಸಿಕೊಳ್ಳಬೇಕಾಗುತ್ತದೆ ಎಂದರು.

ಚಿಂತೆ ಮತ್ತು ಕ್ರೋಧಗಳು ಉಪದೇಶದಿಂದ ಪರಿಹಾರಗೊಳ್ಳಬಹುದು. ಆದರೆ, ಭಯ ಕಡಿಮೆ ಮಾಡಿಕೊಳ್ಳಲು ದೇವಸ್ಥಾನಗಳು ಬೇಕು. ಭಯ ಉಂಟಾದಾಗ ಭಗವಂತನಲ್ಲಿ ಮನಸ್ಸಿಟ್ಟು ಆರಾಧನೆ ಮಾಡಬೇಕು. ಕೋಟ್ಯಂತರ ರು. ವೆಚ್ಚ ಮಾಡಿ ಸುಂದರವಾದ ಶಿಲಾಮಯ ಮಂದಿರ ನಿರ್ಮಿಸಿದ್ದೀರಿ. ನಿತ್ಯ ನೈಮಿತ್ತಿಕ ಪೂಜೆ ನಡೆಯುವಂತಾಗಬೇಕು. ಲಕ್ಷ್ಮೀ ನರಸಿಂಹನೆಂದರೆ ತ್ರಿಮೂರ್ತಿ ಸ್ವರೂಪ ಹಾಗಾಗಿ ಎಲ್ಲಿ ದೈವೀ ಸಾನ್ನಿಧ್ಯವಿರುತ್ತದೋ ಅಲ್ಲಿ ಶ್ರೇಯಸ್ಸು ನೆಲೆಸಲು ಸಾಧ್ಯ ಎಂದರು.

ಗುಜರಾತ ರಾಜ್ಯದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ನರಸಿಂಹ ಕೋಮಾರ ಮಾತನಾಡಿ, ಪ್ರತಿಯೊಂದು ಕಾಲಘಟ್ಟದಲ್ಲೂ ಬದಲಾದ ವಿಶೇಷತೆ ಇರುತ್ತದೆ. ಇಂದು ತಂತ್ರಜ್ಞಾನ ಕ್ರಾಂತಿ ಮಾಡಿದೆ. ನಾವು ಚಿಕ್ಕವರಿರುವಾಗ ಇಲ್ಲಿ ಯಾವುದೇ ಸೌಲಭ್ಯಗಳು ಇಲ್ಲವಾಗಿತ್ತು. ಇಂದು ಪ್ರಾಥಮಿಕದಿಂದ ಪ್ರೌಢ ಶಿಕ್ಷಣದವರೆಗೂ ಹಿರಿಯರು ಒದಗಿಸಿಕೊಟ್ಟಿದ್ದಾರೆ. ಅಂದು ಜೀವನ ಶಿಕ್ಷಣ ಪ್ರತಿಯೊಬ್ಬರಿಗೂ ದೊರೆಯುತ್ತಿತ್ತು. ಪ್ರತಿ ಕೆಲಸವನ್ನು ನಾವೇ ಮಾಡುತ್ತಿದ್ದೆವು. ಇಂದು ಸ್ಪರ್ಧಾತ್ಮಕ ಜಗತ್ತಿನಲ್ಲಿದ್ದೇವೆ. ಆ ಮಟ್ಟಕ್ಕೆ ನಾವು ತಲುಪಬೇಕಾಗುತ್ತದೆ. ಸಹಬಾಳ್ವೆ, ಸಾಂಘಿಕ ಬದುಕು ಉತ್ತಮ ಜೀವನಕ್ಕೆ ಅನಿವಾರ್ಯ ಎಂದರು.

ಟಿಎಂಎಸ್ ಅಧ್ಯಕ್ಷ ಎನ್.ಕೆ. ಭಟ್ಟ ಅಗ್ಗಾಶಿಕುಂಬ್ರಿ, ಟಿಎಂಎಸ್ ನಿರ್ದೇಶಕ ಟಿ.ಎನ್. ಭಟ್ಟ ನಡಿಗೇಮನೆ, ಆದರ್ಶ ಸೇವಾ ಸಹಕಾರಿ ಸಂಘದ ಅಧ್ಯಕ್ಷ ನಾಗೇಂದ್ರ ಹೆಗಡೆ, ಗೋಕರ್ಣದ ಗಣಪತಿ ಭಟ್ಟ ಹಿರೇ ಮಾತನಾಡಿದರು.

ವೇದಘೋಷದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕಟ್ಟಡ ಸಮಿತಿ ಸಲಹೆಗಾರ ಎಸ್.ಎನ್. ಗಾಂವ್ಕಾರ ಪ್ರಾಸ್ತಾವಿಕ ಮಾತನಾಡಿದರು. ಡಾ. ಡಿ.ಕೆ. ಗಾಂವ್ಕಾರ ಸ್ವಾಗತಿಸಿದರು. ಭಾಗ್ಯಾ ಹೆಬ್ಬಾರ ನಿರ್ವಹಿಸಿದರು. ಶ್ರುತಿ ಕೋಮಾರ ವಂದಿಸಿದರು.